ಅದಕ್ಕಿಂತ ನೀರಿನ ಪ್ರಮಾಣ ಜಾಸ್ತಿಯಾಗಿದೆ. ಆ ನದಿಯಲ್ಲಿ ನೀರಿದ್ದರೆ ಅದನ್ನು ತಮ್ಮ ಹಾಸನ ತಾಲ್ಲೂಕಿಗೆ ಕೊಂಡೊಯ್ಯಲು ನಮ್ಮದೇನೂ ಅಡ್ಡಿಯಿಲ್ಲ. ಅದಕ್ಕೇ ನಾನು ಹೇಳಿದ್ದು. ಹಾಸನದಿಂದ ಎಲ್ಲ ಅಪಹರಿಸಿಕೊಂಡು ಎಲ್ಲವನ್ನು ಹೊಳೀನರಸೀಪುರಕ್ಕೆ ಒಯ್ಯಬೇಕೆಂಬ ಇರಾದೆ ನಮಗಿಲ್ಲ. ಹೊಳೆನರಸೀಪುರ ರೈತರು ಹಾಸನ ರೈತರೆಲ್ಲ ಒಂದೇ, ಭೇದ ಇಲ್ಲ. ತಾವು ಹೇಳುವುದು ಇಲ್ಲ ಅವರಿಗೆ ಜಾಸ್ತಿ ನೀರು ಹೋಗ್ತಾ ಇದೆ. ನಮಗೆ ನೀರು ಜಾಸ್ತಿ ಬರ್ತಾ ಇಲ್ಲ ಅನ್ನೋ ಪ್ರಶ್ನೆಯಲ್ಲ. ಇಲ್ಲಿ ಹಾಸನ ತಾಲ್ಲೂಕಿಗೆ ಇನ್ನೂ ಹೆಚ್ಚಿನ ಭೂಮಿಗೆ ನೀರು ಕೊಡುವ ಅವಕಾಶ ಇದ್ದರೆ ಅದರ ಬಗ್ಗೆ ಸರ್ಕಾರ ಪ್ರಾಮಾಣಿಕವಾದಂಥ ಪ್ರಯತ್ನ ಮಾಡುತ್ತದೆ. ಅದರ ಇನ್‌ವೆಸ್ಟಿಗೇಷನ್ ಆಗುತ್ತದೆ. ಅದಕ್ಕಾಗೇ ತಮ್ಮನ್ನು ಕರೆಸಿ ಮಾತನಾಡುತ್ತೇವೆ. ಅದು ಆಗುವುದಿಲ್ಲ ಎಂದು ನಾವು ಹೇಳಿದ ಮೇಲೆ ತಾವು ಬೇಕಾದರೆ ಚಳುವಳಿಯೋ ಅಥವಾ ಬೇರೆ ದಾರಿ ಹುಡುಕುವ ಆಲೋಚನೆ ಮಾಡಿ, ಅದು ಆಗುವುದಿಲ್ಲವೆಂದು ಹೇಳುವವರೆಗೂ ಸರ್ಕಾರದ ಪ್ರಾಮಾಣಿಕತೆಯ ಬಗ್ಗೆ ತಾವು ನಂಬಿಕೆ ಇಡಬೇಕೆಂದು ತಮ್ಮಲ್ಲಿ ನಾನು ಪ್ರಾರ್ಥಿಸಿಕೊಳ್ಳುತ್ತೇನೆ.

3. ಹುಬ್ಬಳ್ಳಿ ಮಹಾದೇವ ಬಟ್ಟೆ ಗಿರಣಿಯನ್ನು ಪುನಶ್ಚೇತನಗೊಳಿಸುವುದು.

ಶ್ರೀ ಗೋಪಿನಾಥ್ ಆರ್. ಸಾಂಡ್ರಾ ಹುಬ್ಬಳ್ಳಿ ಉಪಾಧ್ಯಕ್ಷಣಿಯವರೇ, ಹುಬ್ಬಳ್ಳಿಯ ಮಹಾದೇವ ಟೆಕ್ಸ್‌ಟೈಲ್ ಮಿಲ್ಸ್‌ನ್ನು ಪುನಶ್ಚೇತನಗೊಳಿಸುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಉಪಾಧ್ಯಕ್ಷಿಣಿಯವರೇ, ಮುಖ್ಯಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ಮಾಡಲು ತಮ್ಮ ಅನುಮತಿಯನ್ನು ಬೇಡುತ್ತಿದ್ದೇನೆ.

ಮಹದೇವ ಟೆಕ್ಸ್‌ಟೈಲ್ ಮಿಲ್ ಒಂದು ಸಂಯುಕ್ತ ಹತ್ತಿ ಗಿರಣಿಯಾಗಿ 1898ರಲ್ಲಿ ಸ್ಥಾಪನೆಯಾಯಿತು. ಇದರ ಆಡಳಿತ ಕಾಲಕಾಲಕ್ಕೆ ಬೇರೆ ಬೇರೆಯವರ ಅಧೀನಕ್ಕೆ ಒಳಪಟ್ಟಿತ್ತು. ಅಂತಿಮವಾಗಿ ಕೇಂದ್ರಸರ್ಕಾರವು ಸದರಿ ಮಿಲ್ಲಿನ ವಹಿವಾಟನ್ನು ರಾಜ್ಯ ಸರ್ಕಾರಕ್ಕೆ ಇಂಡಸ್ಟ್ರೀಸ್ (ಡೆವೆಲಪ್‌ಮೆಂಟ್ ಅಂಡ್ ರೆಗ್ಯುಲೇಷನ್) ಆಕ್ಟ್ 1951 ಇದರಡಿ ವಹಿಸಿತು. ಇದರ ಆಡಳಿತ ವಹಿವಾಟನ್ನು ಏಪ್ರಿಲ್ 1979ರಲ್ಲಿ ವಹಿಸಿಕೊಂಡ ನಂತರ ರಾಜ್ಯ ಸರ್ಕಾರವು 1986ರಲ್ಲಿ ಒಂದು ಸುಗ್ರೀವಾಜ್ಞೆ ಹೊರಡಿಸಿ ಇದರ ಆಸ್ತಿ ಮತ್ತು ಹೊಣೆಗಾರಿಕೆಯನ್ನು ವಹಿಸಿ ಕೊಂಡಿತು. 1979ರಿಂದ ರಾಜ್ಯ ಸರ್ಕಾರವು ಒಟ್ಟು ರೂ. 135 ಲಕ್ಷ ಹಣವನ್ನು ಸದರಿ ಮಿಲ್ಲಿಗೆ ಸಹಾಯ ಧನವಾಗಿ ನೀಡಿದೆ. ನಂತರ 1988ರ ಡಿಸೆಂಬರ್ ಮಾಹೆಯಲ್ಲಿ ಸದರಿ ಮಿಲ್ಲಿನ ಆಡಳಿತವನ್ನು ಕಂಪನಿ ಲಾ ಆಕ್ಟ್ ಅಡಿಯಲ್ಲಿ ನೋಂದಾಯಿಸಲ್ಪಟ್ಟ ಕರ್ನಾಟಕ ಸ್ಟೇಟ್ ಟೆಕ್ಸ್‌ಟೈಲ್ಸ್ ಲಿಮಿಟೆಡ್‌ಗೆ ವರ್ಗಾಯಿಸಲಾಯಿತು. ಸದರಿ ನಿಯಮದ ಅಡಿ ಹಿಂದಿನ ಬಾಕಿಗಳನ್ನು ಪಾವತಿ ಮಾಡಲು ಒಬ್ಬ ಕಮೀಷನರ್ ಫಾರ್ ಪೇಮೆಂಟ್ಸ್ ಅವರನ್ನು ನೇಮಕ ಮಾಡಲಾಯಿತು. ಸದರಿಯವರಿಗೆ ಅಗತ್ಯವಾದ ಹಣವನ್ನು ಬಿಡುಗಡೆ ಮಾಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ. ಹಿಂದಿನ ಹೊಣೆಗಾರಿಕೆಯನ್ನು ಪಾವತಿ ಮಾಡದೆ ಮಿಲ್ಲಿನ ಆಸ್ತಿಗಳ ಮಾಲಿಕತ್ವ ಸರ್ಕಾರಕ್ಕೆ ಬರುವುದಿಲ್ಲ.

ಸದರಿ ಮಿಲ್ಲಿನ ಯಂತ್ರಗಳು ತುಂಬಾ ಹಳೆಯದಾಗಿರುವುದರಿಂದ ಮಿಲ್ಲನ್ನು ಸುಸ್ಥಿತ ಆರ್ಥಿಕ ತಳಹದಿಯ ಮೇಲೆ ನಡೆಸಿಕೊಂಡು ಹೋಗುವುದು ಸಾಧ್ಯವಾಗುವುದಿಲ್ಲ. ಈ ಮಿಲ್ಲಿನ ಪರಿಸ್ಥಿತಿಯನ್ನು ಟೆಕ್ಸ್‌ಟೈಲ್ ಬಗ್ಗೆ ಪರಿಣತಿ ಹೊಂದಿದ ಸಿಟ್ರಾ ಸಂಸ್ಥೆಯವರು (ಸೌತ್ ಇಂಡಿಯನ್ ಟೆಕ್ಸ್‌ಟೈಲ್ ರೀಸರ್ಚ್ ಅಸೋಸಿಯೇಟ್ಸ್) ಪರಿಶೀಲಿಸಿ, ಮಿಲ್ ಈಗಿರುವ ಪರಿಸ್ಥಿತಿಯಲ್ಲಿ ನಡೆಸಲು ಸಾಧ್ಯವಿಲ್ಲವೆಂದೂ ಅದನ್ನು ಮುಚ್ಚಬೇಕೆಂದು ಶಿಫಾರಸ್ಸು ಮಾಡಿದೆ. ಆದಾಗ್ಯೂ, ಸರ್ಕಾರವು ಅಲ್ಲಿನ ಕಾರ್ಮಿಕರ ಹಿತದೃಷ್ಟಿಯಿಂದ

ಮಿಲ್ಲನ್ನು ನಡೆಸುತ್ತಿದೆ. ನೇಯ್ಗೆ ವಿಭಾಗದಲ್ಲಿ ಬಹಳಷ್ಟು ನಷ್ಟ ಸಂಭವಿಸುತ್ತಿರುವುದರಿಂದ ನೂಲು ತೆಗೆಯುವ ವಿಭಾಗಕ್ಕೆ ಹೆಚ್ಚಿನ ಮಹತ್ವ ಕೊಟ್ಟು ನಡೆಸುವುದರ ಮೂಲಕ ನಷ್ಟವನ್ನು ಕಡಿಮೆ ಮಾಡಲಾಗುತ್ತಿದೆ. ಈ ದಿಶೆಯಲ್ಲಿ ಒಂದು ಪುನರ್ ಸಜ್ಜೀಕರಣ ಪ್ರಸ್ತಾವನೆಯನ್ನು ತಯಾರಿಸಲಾಗಿದ್ದು ಅದು ಸರ್ಕಾರದ ಪರಿಶೀಲನೆಯಲ್ಲಿದೆ. ಸರ್ಕಾರವು ಬಹಳ ಹತ್ತಿಯ ಯಂತ್ರಗಳನ್ನು ಮಾರಿ ಆಧುನಿಕ ಯಂತ್ರಗಳನ್ನೊಳಗೊಂಡ ಹೊಸ ಮಿಲ್ಲನ್ನು ಪ್ರಾರಂಭಿಸುವ ಸಾಧ್ಯತೆಗಳನ್ನು ಸಹ ಪರಿಶೀಲಿಸುತ್ತಿದೆ.

ಕ್ಲಿಷ್ಟ ಆರ್ಥಿಕ ಪರಿಸ್ಥಿತಿಯಿಂದಾಗಿ ಮಹದೇವ ಟೆಕ್ಸ್‌ಟೈಲ್ ಮಿಲ್ ಕಾನೂನು ರೀತಿ ಕೊಡಲೇ ಬೇಗಾದ ವಿದ್ಯುತ್ ಶುಲ್ಕ ವಾಣಿಜ್ಯ ತೆರಿಗೆ ಮುಂತಾದ ಶುಲ್ಕಗಳನ್ನು ಪಾವತಿ ಮಾಡಲು ಸಾಧ್ಯವಾಗಿಲ್ಲ. ಸರ್ಕಾರವು ಎಲ್ಲಾ ವಿಷಯಗಳನ್ನು ಪರಿಶೀಲಿಸಿ ಒಂದು ಅಂತಿಮ ತೀರ್ಮಾನವನ್ನು ಶೀಘ್ರವಾಗಿ ತೆಗೆದುಕೊಳ್ಳುತ್ತದೆ.

4.10 ಪಿ.ಎಂ.

ಶ್ರೀ ಗೋಪಿನಾಥ ಆರ್ ಸಾಂಡ್ರ : ಸನ್ಮಾನ್ಯ ಅಧ್ಯಕ್ಷೆಯವರೇ ಈ ಸಂದರ್ಭದಲ್ಲಿ ನಾನು ಒಂದು ಮಾತು ಹೇಳಬೇಕಾಗಿದೆ. ಮಹದೇವ ಟೆಕ್ಸ್‌ಟೈಲ್ಸ್ ಮಿಲ್‌ನಲ್ಲಿ ಎರಡು ಸಾವಿರ ಜನ ಕೆಲಸ ಮಾಡುತ್ತಿದ್ದರು. ಆ ಎರಡು ಸಾವಿರ ಜನರಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಹಾಗೂ ಹಿಂದುಳಿದ ವರ್ಗದವರು ಶೇಕಡ 90ರಷ್ಟು ಮಂದಿ ಕೆಲಸ ಮಾಡುವವರು ಇದ್ದಾರೆ. ಅವರನ್ನು ಮನೆಗೆ ಕಳುಹಿಸುವ ಒಂದು ಸುಸಜ್ಜಿತವಾದ ಕಾರ್ಯ ನಡೆದಿದೆ ಎಂದು ಹೇಳಬಯಸುತ್ತೇನೆ. ಇದು ಅಂಥ ಒಂದು ದಾರುಣ ಕಥೆ ಇದೆ. ಇದನ್ನು ಕೇಳಿದರೆ ರಾಜಕೀಯ ಧುರೀಣರು ಹೇಗೆ ಮಿಲ್ಲನ್ನು ನಾಶ ಮಾಡಬೇಕೆಂಬ ಉದ್ದೇಶ ಇಟ್ಟುಕೊಂಡಿದ್ದಾರೆಂಬುದು ಸ್ಪಷ್ಟವಾಗುತ್ತದೆ. ಈ ದಿಸೆಯಲ್ಲಿ ಸರ್ಕಾರ 1986ರ ಸೆಪ್ಟೆಂಬರ್ 29ರಂದು ಸುಗ್ರೀವಾಜ್ಞೆಯನ್ನು ಸರ್ಕಾರ ಹೊರಡಿಸಿದೆ. ಅದನ್ನು ತಮ್ಮ ಅವಗಾಹನೆಗಾಗಿ ತರಬಯಸುತ್ತೇನೆ.

"ಸಾರ್ವಜನಿಕ ಹಿತದೃಷ್ಟಿಯಿಂದ ಸದರಿ ಮಿಲ್ಲಿನ ಕಟ್ಟಡಗಳು, ಯಂತ್ರಗಳು, ಉಪಕರಣಗಳು ಇತರ ಉತ್ಪಾದನೆಯ ವಸ್ತುಗಳು ಹಳೆಯ ಮಾದರಿಯವಾಗಿರುವುದರಿಂದ ಕೆಲಸ ನಿರ್ವಹಿಸಲು ಅಸಮರ್ಥವಾಗಿರುವುದರಿಂದ ಮತ್ತು ಗಿರಣಿಯು ಆರ್ಥಿಕವಾಗಿ ಹಿಂದೆ ಬಿದ್ದಿರುವುದರಿಂದ, ಈ ಎಲ್ಲ ಸುಧಾರಣೆಗಳನ್ನು ಮಾಡಲು, ಸದರಿ ಗಿರಣಿಯನ್ನು ಪುನರ್‌ಸ್ಥಾಪನೆ ಮಾಡಲು ಮತ್ತು ಅದರ ಅಭಿವೃದ್ಧಿಗಾಗಿ ಹಾಗೂ ಅರ್ಥ ವ್ಯವಸ್ಥೆಗಾಗಿ ಏರ್ಪಾಡು ಮಾಡಿ ಅವಶ್ಯವಾಗಿರುವ ಬಟ್ಟೆ, ನೂಲನ್ನು ನಿರಂತರವಾಗಿ ಉತ್ಪಾದನೆ ಮಾಡಲು ಮತ್ತು ಜನಸಾಮಾನ್ಯರ ಹಿತಾಸಕ್ತಿಯನ್ನು ಸಾಧಿಸಬೇಕಾಗಿದೆ ಎಂಬುದನ್ನು ಖಚಿತಪಡಿಸುವುದಕ್ಕೆ ಸದರಿ ಗಿರಣಿಯನ್ನು ಆರ್ಜಿಸುವುದು ಅವಶ್ಯಕವಾಗಿದೆ. ಮತ್ತು ನಿರುದ್ಯೋಗ ಪರಿಹಾರ ಒದಗಿಸಬೇಕಾಗಿರುವುದರಿಂದ ಈ ಗಿರಣಿಯನ್ನು ನಾವು ಸುಗ್ರೀವಾಜ್ಞೆ ಮೂಲಕ ಸರ್ಕಾರದವರು ತೆಗೆದುಕೊಂಡಿದ್ದೇವೆ.

ಸರ್ಕಾರ ಇದನ್ನು ತೆಗೆದುಕೊಂಡನಂತರ ಏನು ಮಾಡಿದ್ದಾರೆಂಬುದನ್ನು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅಲ್ಲಿದ್ದ 25 ಸಾವಿರ ಸ್ಪಿನ್ನಿಂಗ್ ಯಂತ್ರಗಳ ಪೈಕಿ 10 ಸಾವಿರ ತೆಗೆದುಕೊಂಡಿದ್ದಾರೆ. ಆ ಹತ್ತು ಸಾವಿರ ಯಂತ್ರಗಳನ್ನು ಸಹ ಸರಿಯಾಗಿ ನಡೆಯುವ ವ್ಯವಸ್ಥೆ ಮಾಡಲಿಲ್ಲ. ಇವರು ತೆಗೆದುಕೊಂಡಾಗ 400 ಮಗ್ಗಗಳು ಇದ್ದವು. ಈಗ 150 ಮಗ್ಗಗಳ ಸ್ಥಿತಿಗೆ ಬಂದಿದೆ. 64 ಎಕರೆ ಬೆಲೆಯುಳ್ಳ ಭೂಮಿಯನ್ನು ಪಡೆದಂತಹ ಮಿಲ್ಲಿನ ಆಸ್ತಿಯನ್ನು ಮಾರಬೇಕು. ಇದರಿಂದ ಸ್ವಾರ್ಥ ಸಾಧನೆ ಮಾಡಬೇಕೆಂದು ಹಿಂದಿನ ಸರ್ಕಾರ ಒಂದು ನಿಲುವು ತೆಗೆದುಕೊಂಡಿತ್ತು. ಅದನ್ನು ವಿರೋಧಿಸಿದಾಗ ಈ ಟೆಕ್ಸ್‌ಟೈಲ್ಸ್ ಕಾರ್ಪೊರೇಷನ್ ಆಯಿತು. ಈ ಕಾರ್ಪೊರೇಷನ್ ಆದನಂತರ ಇವರು ಮಾಡಿದ್ದು ಒಂದು ನಯಾಪೈಸೆ ಕೂಡ ಕೊಡಲಿಲ್ಲ. ಈ

ಮಿಲ್ಲನ್ನು ಸರ್ಕಾರದವವು ರಾಷ್ಟ್ರೀಕರಣ ಮಾಡಬೇಕೆಂದಾಗ ದಿ. ದೇವರಾಜ ಅರಸು ಅವರು, ಹಿಂದಿನ ಮುಖ್ಯಮಂತ್ರಿಗಳು ಈ ಮಿಲ್ಲನ್ನು ಬಂದ್ ಮಾಡುವುದು ಬೇಡ, ಇದಕ್ಕೆ ನಾವು ಸರ್ಕಾರದ ನೆರವು ಕೊಡುತ್ತೇವೆಂದು ನಮಗೆ ಹಣ ಕೊಟ್ಟರು.

ಉಪಾಧ್ಯಕ್ಷಿಣಿಯವರು : ಭಾಷಣ ಮಾಡುವುದು ಬೇಡ.

ಶ್ರೀ ಗೋಪಿನಾಥ ಆರ್. ಸಾಂಡ್ರ : ಸರ್ಕಾರದವರು ಏನು ಮಾಡಿದ್ದಾರೆಂದು ನಾನು ಹೇಳಲಿಕ್ಕೆ ನಿಂತಿದ್ದೇನೆ. ಇದು ಎರಡು ಸಾವಿರ ಕುಟುಂಬಗಳ ಪರಿಸ್ಥಿತಿಯನ್ನು ನಿಮ್ಮ ಎದುರಿಗೆ ಇಡುತ್ತೇನೆ. ಇವರು ತೆಗೆದುಕೊಂಡನಂತರ 29-12-87ರಲ್ಲಿ ಕರ್ನಾಟಕ ಸ್ಟೇಟ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ಎಂದು ಮಾಡಿದರು. 1983ರಿಂದ 87ರವರೆಗೆ ಒಂದು ನಯಾಪೈಸಾ ಇವರು ಕೊಡಲಿಲ್ಲ. ನಮ್ಮ ಕಾಂಗ್ರೆಸ್ ಸರ್ಕಾರ ಇದ್ದಾಗ ದಿ. ದೇವರಾಜ ಅರಸು ಅವರು ಹಣವನ್ನು ಕೊಟ್ಟರು.

ಶ್ರೀ ಹೆಚ್.ಎಸ್ ಕೌಜಲಗಿ : ಬೊಮ್ಮಾಯಿ ಸರ್ಕಾರ ಇದ್ದಾಗಲೂ ಕೊಟ್ಟರು.

ಶ್ರೀ ಗೋಪಿನಾಥ್ ಆರ್. ಸಾಂಡ್ರಾ : ಬೇರೆ ಸರ್ಕಾರ ಬಂದಮೇಲೆ ಈ ಮಿಲ್ಲಿನ ಉದ್ಧಾರಕ್ಕಾಗಿ ಪ್ರಗತಿಗಾಗಿ ಅಭಿವೃದ್ಧಿಗಾಗಿ ಒಂದು ನಯಾಪೈಸಾ ಕೊಟ್ಟಿಲ್ಲ. ಇದನ್ನು ಖಡಾಖಂಡಿತವಾಗಿ ಹೇಳುತ್ತೇನೆ. ಅವರು ಎಲ್ಲಿಯಾದರೂ ಕೊಟ್ಟಿದ್ದರೆ ಹೇಳಲಿ, ನಾನು ಶಿಕ್ಷೆಯನ್ನು ಅನುಭವಿಸುವುದಕ್ಕೆ ತಯಾರಿದ್ದೇನೆ. ಈ ಮಿಲ್ಲನ್ನು ತೆಗೆದುಕೊಂಡ ನಂತರ ಹಣವನ್ನು ಕೊಡಲಿಲ್ಲ. ಅಲ್ಲಿದಂತಹ ಟೆಕ್ನಿಕಲ್ ಪರ್‌ಸನ್ಸ್ ಯಾರಿದ್ದರು, ಜನರಲ್ ಮ್ಯಾನೇಜರ್ ಸ್ಪಿನ್ನಿಂಗ್ ಮಾಸ್ಟರ್ ವೀವಿಂಗ್ ಮಾಸ್ಟರ್ ಇಂಜಿನಿಯರ್ ಸೇಲ್ಸ್ ಆಫೀಸರ್ ಯಾರೂ ಇವತ್ತು ಇಲ್ಲ. ಈ ಮಿಲ್ ಅನ್ನು ಆಡಳಿತ ಮಾಡುವಂತಹ ಜನರು ಟೆಕ್ನಿಕಲ್ ಪರ್‌ಸನ್ಸ್‌ನ್ನು ಇಟ್ಟುಕೊಂಡಿಲ್ಲ.

ಉಪಾಧ್ಯಕ್ಷಿಣಿಯವರು : ಈಗ ತಾವು ಏನು ಹೇಳಬೇಕು, ಹೇಳಿ ಮುಗಿಸಿ ಅನಂತರ ಅವರು ಹೇಳುತ್ತಾರೆ.

ಶ್ರೀ ಗೋಪಿನಾಥ ಆರ್. ಸಾಂಡ್ರಾ : ಈಗ ಆಡಳಿತವನ್ನು ಏನು ಮಾಡಿದ್ದಾರೆ. ಆ ಆಡಳಿತವನ್ನು ಸರಿಯಾಗಿ ಮಾಡಿಲ್ಲ. ಆ ಮಿಲ್ಲಿಗೆ 1 ಕೋಟಿ 35 ಲಕ್ಷ ರೂಪಾಯಿ ಬಿಟ್ಟು ಬೇರೆ ಯಾವುದನ್ನೂ ಕೊಟ್ಟಿಲ್ಲ. ನಮ್ಮ ಸರ್ಕಾರ 2 ಸಾವಿರ ಕಾರ್ಮಿಕ ಕುಟುಂಬಗಳನ್ನು ರಕ್ಷಿಸುವಂತಹ ಕರ್ತವ್ಯ ಮಾಡಬೇಕೆಂದು ತಮ್ಮ ಗಮನವನ್ನು ಸೆಳೆಯುತ್ತೇನೆ. ಇದಕ್ಕೆ ಸಾಕಷ್ಟು ಹಣವನ್ನು ಪೂರೈಸಬೇಕು. ಇದಕ್ಕೆ 30 ಕೋಟಿ ರೂಪಾಯಿಯ ಆಸ್ತಿ ಇದೆ. ಸರ್ಕಾರದವರು ಹಣ ಕೊಟ್ಟರೂ ಪರವಾಗಿಲ್ಲ. ಒಂದು ವೇಳೆ ಅವರು ಕೊಡುವುದಿಲ್ಲ. ಅಂದರೆ ಬೇರೆ ಫೈನಾನ್ಸಿಂಗ್ ಏಜೆನ್ಸಿಯವರಿಗೆ ಕೊಡುವಂತಹ ಒಂದು ವ್ಯವಸ್ಥೆಯನ್ನು ಮಾಡಿ, ಇದನ್ನು ಮಾಡ್ರನೈಸ್ ಮಾಡುತ್ತೇವೆ ಮತ್ತು ಹೆಚ್ಚಿನ ಕೂಲಿ ಅಲ್ಲಿನ ಕಾರ್ಮಿಕರಿಗೆ ಸಿಗುವಂತಹ ವ್ಯವಸ್ಥೆಯನ್ನು ಮಾಡುತ್ತೇವೆಂದು ಹೇಳಿ ಆ ಜಮೀನನ್ನು ತೆಗೆದುಕೊಂಡರು. ಮೊಯಿಲಿಯವರು ಅಜೀಜ್ ಸೇಠ್‌ರವರು ಈ ಮಿಲ್ಲನ್ನು ಖಾಸಗಿಯವರಿಗೆ ಕೊಡುವುದಿಲ್ಲವೆಂದು ಹೇಳಿದ್ದಾರೆ. ಈಗ ತಂದಿರುವ ಸುಗ್ರೀವಾಜ್ಞೆಯ ಉದ್ದೇಶ ಏನಿದೆ ಅದರ ಉದ್ದೇಶವನ್ನು ಸಾಧಿಸಲೇಬೇಕು. ಇಲ್ಲದಿದ್ದರೆ ಈ ಎರಡು ಸಾವಿರ ಕುಟುಂಬಗಳು ಅಷ್ಟೇ ಅಲ್ಲ, ಹುಬ್ಬಳಿ ಧಾರವಾಡ ನಗರದ 6.5 ಲಕ್ಷ ಜನರ ಒಂದು ಬೇಡಿಕೆಯಾಗಿದೆ. ಇನ್ನು 2 ತಿಂಗಳೊಳಗೆ ಮಾಡಬೇಕು. ಈ ಮಿಲ್ಲಿನ ಕಾರನ್ನು ಮತ್ತು ಬ್ಯಾಂಕಿನ ಅಕೌಂಟ್‌ನ್ನು ಸೀಜ್ ಮಾಡಿದ್ದಾರೆ. ಅಲ್ಲಿಯವರೆಗೂ ಈ ಜನ ಸುಮ್ಮನೆ ಕುಳಿತ್ತಿದ್ದಾರೆ. ಅವರ ಉದ್ದೇಶ ದುರುದ್ದೇಶವಾಗಿದೆ. ಈ ಮಿಲ್ಲನ್ನು ಮುಚ್ಚಿ, ಆಸ್ತಿಪಾಸ್ತಿಗಳನ್ನು ತೆಗೆದುಕೊಂಡು ಹರಾಜು ಹಾಕಬೇಕೆಂದು ಹೇಳುತ್ತಿದ್ದಾರೆ. ನಾನು ಅತ್ಯಂತ ಕಳಕಳಿಯಿಂದ 6.5 ಲಕ್ಷ ಜನರ ಪರವಾಗಿ ಈ

ಮಿಲ್ಲನ್ನು ಉಳಿಸಬೇಕು. ಬೆಳೆಸಬೇಕು. ಮತ್ತು ಅಲ್ಲಿ ಹೆಚ್ಚುಹೆಚ್ಚು ಜನರು ಕೆಲಸ ಮಾಡುವಂತೆ ವ್ಯವಸ್ಥೆಯನ್ನು ಮಾಡಬೇಕೆಂದು ಸನ್ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಈ ಒಂದು ಮಿಲ್ಲನ್ನು ಮುಚ್ಚಲೇಬೇಕೆಂದು ಸರ್ಕಾರದ ಉದ್ದೇಶ ಇದ್ದರೆ ಅದು ಬಹಳ ಕಷ್ಟ ಇರಲಿಲ್ಲ. ಏಕೆಂದರೆ ಈ ಟೆಕ್ಸ್‌ಟೈಲ್ಸ್ ಬಗ್ಗೆ ಪರಿಣತಿ ಹೊಂದಿದಂತಹ ಇಂಡಿಯನ್ ಟೆಕ್ಸ್‌ಟೈಲ್ ರಿಸರ್ಚ್ ಅಸೋಸೇಷನ್‌ನವರು ಇದನ್ನು ನಡೆಸಲು ಸಾಧ್ಯವಿಲ್ಲ. ಮುಚ್ಚಲೇಬೇಕೆಂದು, ವರದಿ ಕೊಟ್ಟಾಗಲೆ...

ಉಪಾಧ್ಯಕ್ಷಣಿಯವರು : ಶ್ರೀಯುತ ಸಾಂಡ್ರಾರವರೆ, ಉತ್ತರ ಹೇಳಲಿ, ಕೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಆಗಲೇ ಅದನ್ನು ಮುಚ್ಚಲು ಸರ್ಕಾರ ನಿರ್ಣಯ ಮಾಡಬಹುದಾಗಿತ್ತು. ನಮ್ಮ ವರದಿಯ ಪ್ರಕಾರ ಅಲ್ಲಿ 834 ಜನ ಕೆಲಸ ಮಾಡುತ್ತಿದ್ದಾರೆ. ಈಗ ಅಲ್ಲಿ ಲೈಸೆನ್ಸ್ಡ್ ಕ್ಯಾಪ್ಯಾಸಿಟಿ 25 ಸಾವಿರ ಸ್ಪಿಂಡಲ್ಸ್, ಆದರೆ ಇನ್ಸ್ಟಾಲ್ ಕ್ಯಾಪ್ಯಾಸಿಟಿ 12 ಸಾವಿರ ಸ್ಪಿಂಟಲ್ಸ್ ಆದ್ದರಿಂದ ಇದನ್ನು ಸರ್ಕಾರ ಮುಚ್ಚಬಾರದೆಂದು ಹೇಳಿ ಪುನರ್‌ಸಜ್ಜೀಕರಣದ ಒಂದು ಯೋಜನೆಯನ್ನು ಮಾಡಿದ್ದೇವೆ. ಅದನ್ನು ಎರಡು ಹಂತದಲ್ಲಿ ಅನುಷ್ಠಾನ ಮಾಡಬೇಕೆಂಬ ಉದ್ದೇಶವಿದೆ.

ಅದು ಒಂದನೇ ಹಂತದಲ್ಲಿ 165 ಲಕ್ಷ ರೂಪಾಯಿ ಆಗುತ್ತದೆ. ಎರಡನೇ ಹಂತದಲ್ಲಿ ಸುಮಾರು 14ಕೋಟಿ ರೂಪಾಯಿಗಳಾಗುತ್ತದೆ. ಇದರ ಬಗ್ಗೆ ರೀಹ್ಯಾಬಿಲಿಟೇಷನ್ ಸ್ಕೀಮ್ ಒಂದು ತಯಾರು ಆಗುತ್ತಿದೆ. ಅದು ತಯಾರು ಆದಮೇಲೆ ಆ ಸಿಟ್ಟಾ ವರದಿಯನ್ನು ತಿರಸ್ಕರಿಸಿ ಪುನರ್‌ಸಜ್ಜೀಕರಣ ಮಾಡತಕ್ಕಂಥ ಒಂದು ಯೋಜನೆಯನ್ನು ಸ್ವೀಕಾರ ಮಾಡಿ, ಆಮೇಲೆ ನಾವು ಟರ್ಮ್ ಲೆಂಡಿಂಗ್ ಏನು ಬ್ಯಾಂಕುಗಳು ಇವೆ. ಅಪೆಕ್ಸ್‌ಬ್ಯಾಂಕ್ ಇನ್ಸ್‌ಟಿಟ್ಯೂಷನ್ ಇದೆ. ಅದಕ್ಕೆ ನಾವು ಹೋಗಬೇಕಾಗುತ್ತದೆ. ಆದ್ದರಿಂದ ಇದರ ಬಗ್ಗೆ ಸರ್ಕಾರ ಅಲ್ಲಿಗೆ ಸಿಟ್ಟಾ ವರದಿ ಬಂದು ಹಾಗೆ ಮುಚ್ಚಿಕೊಂಡಿಲ್ಲ. ರೀಹ್ಯಾಬಿಲಿಟೇಷನ್ ಮಾಡಬೇಕೆಂದು ಹೇಳಿ ಉದ್ದೇಶದಿಂದಲೇ ಸಂಬಂಧಪಟ್ಟ ಇಲಾಖೆ ಇದಕ್ಕೆ ಸರಿಯಾದಂಥ ಯೋಜನೆಗಳನ್ನು ತಯಾರು ಮಾಡಿಕೊಂಡು, ಎರಡು ಹಂತದಲ್ಲಿ ಸರ್ಕಾರಕ್ಕೆ ಇದು ಪ್ರಸ್ತಾವನೆ ಕಳುಹಿಸುತ್ತಿದ್ದಾರೆ. ಸರ್ಕಾರಕ್ಕೆ ಪ್ರಸ್ತಾವನೆ ಬಂದಮೇಲೆ ನಾವು ಕ್ಯಾಬಿನೆಟ್ಟಲ್ಲಿ ಅದನ್ನು ಕಂಸಿಂಡರ್ ಮಾಡಿ ಆಮೇಲೆ ಇದರ ಬಗ್ಗೆ ಕೆಲವು ನಿರ್ಣಯ ತೆಗೆದುಕೊಳ್ಳಲಾಗುವುದು. ಈ ಬಗ್ಗೆ ಸನ್ಮಾನ್ಯ ಸದಸ್ಯರು ಏನೋ ಸರ್ಕಾರ ಸುವನೆ ಇದೆ ಸರ್ಕಾರ ಇದನ್ನು ಮುಚ್ಚಬೇಕೆಂದು ಇದೆ. ಎಂದು ಹೇಳುವಂತಾದ್ದು ಇಲ್ಲ. ಆದ್ದರಿಂದ ನಾವು ಇನ್ನು ಮುಂದೆ ಲೆಂಡಿಂಗ್ ಇನ್ಸ್‌ಟಿಟ್ಯೂಷನ್ ಅವರ ಜೊತೆಯಲ್ಲಿ ಮಾತನಾಡಬೇಕಾಗುತ್ತದೆ. ಇದನ್ನು ನಡೆಸುವುದು. ಪುನರ್‌ಸಜ್ಜೀಕರಣ ಗೊಳಿಸಬೇಕೆಂಬುದು ಸರ್ಕಾರದ ಉದ್ದೇಶ ಇದೆ. ಅದು ಎಷ್ಟರ ಮಟ್ಟಿಗೆ ಸಾಧನೆಯಾಗುತ್ತದೆ. ಎಂಬುದು ಮತ್ತೆ ಟರ್ಮ್ ಲೆಂಡಿಂಗ್ ಇನ್ಸ್‌ಟಿಟ್ಯೂಷನ್ ಮೇಲೆ ಡಿಪೆಂಡ್ ಆಗುತ್ತದೆ.

ನಿಯಮ 334 ರ ಮೇರೆಗೆ

ಚಾಮರಾಜನಗರ ತಾಲ್ಲೂಕು ಅರಕಲವಾಡಿ ಗ್ರಾಮದ ಪರಿಶಿಷ್ಟ ಜಾತಿಯವರಿಗೆ ಕೂಲಿ ಒದಗಿಸುವ ಬಗ್ಗೆ.

ಶ್ರೀ ಕೆ. ಸಿದ್ದಯ್ಯ (ಸಂತೆಮಾರನಹಳ್ಳಿ): ಅಧ್ಯಕ್ಷರೇ, ಚಾಮರಾಜನಗರ ತಾಲ್ಲೂಕು ಅರಕಲವಾಡಿ ಗ್ರಾಮದಲ್ಲಿ ವಾಸವಾಗಿರುವ ಪರಿಶಿಷ್ಟ ಜಾತಿಯವರ ಮೇಲೆ ಅದೇ ಗ್ರಾಮದ ಲಿಂಗಾಯಿತರ ಕೋಮಿನವರು ಹಾಗೂ ಮಂಡಲ್ ಪಂಚಾಯ್ತಿಯವರು ಸಾಮಾಜಿಕ ಬಹಿಷ್ಕಾರವನ್ನು ಹಾಕಿರುತ್ತಾರೆಂದು ಸದರಿ ತಾಲ್ಲೂಕಿನ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ತಾಲ್ಲೂಕು ಕಲ್ಯಾಣ ಸಮಿತಿಗೆ ಬಂದಿರುವ ವರದಿಯಿಂದ